

ಮನೆ ಮಾವನೆ ಯಂಗಳೆಲ್ಲಾ ನೋಡಕಂಡಿದ್ದು. ಮಾವ ವಂದಿನ ಇವ್ರ ಕರ್ಕ ಬಂದ. ಇವು ಹೆಣ್ಣ ನೋಡೂಲೆ ಬಂದವ್ವು ಹೇಳ್ದ. ಯನಗೂ ಬೇಡ ಹೇಳೂಲೆ ಬಾಯಿ ಬಂಜಿಲ್ಲೆ. ಆಗೆಲ್ಲಾ ಯನಗೆ ಹೆದ್ರಕೆ. ಹೆದ್ರಕೆ ಹೇಳೂದಕ್ಕಿಂತ ಯಂಗು ವನಮ್ನಿ ಮದ್ವೆ ಆಶೆ ಇದ್ದಿತ್ತೆ. ಆನು ಬೇಡ ಹೇಳಿ ಹೇಳಿದ್ನೆ ಇಲ್ಲೆ. ಯನ್ನ ಆಯಿಗೆ ಮನಸಿತ್ತಿಲ್ಲೆ. ಆದ್ರೆ ಮಾವನ ಯೆದ್ರಿಗೆ ಹೇಳೂಲೆ ಅದ್ಕೆ ಧೈರ್ಯ ಇಲ್ಲೆ. ಯನ್ನ ಹತ್ರೆ ಆಯಿ ಅಲವತ್ತಕಂಡ್ತು. ಆದ್ರೆ ಇವ್ರ ರೂಪಕ್ಕೆ ಮಳ್ಳ ಬಿದ್ದೋಗಿದ್ದಿ. ವಾಲಗ ಊದೇಬುಟೋ'.

'ಗಂಗತ್ತೆ ದೇವ್ರು ಮಾವ ಆಗ ಹೇಂಗಿದ್ದಿದ್ನೆ? ಸುಂದರ ಆಯ್ದನನ ಅಲಾ' ಎಂದಳು ಮೀನಾಕ್ಷಿ.

'ಚಂದ ತಗಂಡ್ ಯಂತ ಮಾಡ್ತೆ. ಖರೆ ಹೇಳೋ ಅಂದ್ರೆ ಆನು ಫಶಿ ಬಿದ್ದಿದ್ದು ಅಲ್ಲೇಯ. ಆಗೇ ಆಟ ಕುಣೇತಿದ್ವೆ. ಪಾರ್ಟು ಚಲೋ ವಪ್ಪತಿತ್ತು. ಮಾತು ಕುಣತಕ್ಕೆಲ್ಲಾ ಈ ಬದಿಗೆ ಯಾರೂ ಇಲ್ಲೆ. ಆಯಿ ಕೊರಗುಟ್ಟೀರೂ, ಆನು ಬೇಡದೇಯ ಹೇಳಿ ಹೇಳಿದ್ನೆ ಇಲ್ಲೆ. ಈಗ ಯಾರೀಗೆ ಹೇಳಿ ಯೇನು ಪ್ರಯೋಜನ.'